ಮೈಸೂರು ರೆವಿನ್ಯೂ ಸರ್ವೇ ಮತ್ತು ಸೆಟಲ್ಮೆಂಟ್ ಇಲಾಖೆ.

ಇಸ್ತಿಹಾರ್‌ನಾಮೆ.

ನಂ. 40. ತಾರೀಖು 25ನೇ ಏಪ್ರೆಲ್ ಸ್ರ 1889.

ಇದರಿಂದ ಸಮಸ್ತ ಜನರಿಗೂ ತಿಳಿಯುವದಕ್ಕೋಸ್ಕರ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿಗೆ ಕೀರಿದ ಶ್ರೀರಂಗಪಟ್ಣ ತಾಲ್ಲೂಕಿನ ಸರ್ವೇ ಜಮಾಬಂದಿಯು ಖರುವ ತಿಂಗಳು ಗುರ್ಯೇ ತಾರೀಖಿಗೆ, ಯಾ ಆ ಪ್ರಮಾರಿಗೆ ಪ್ರಾರಂಭಿಸಲ್ಪಡುತ್ತೆ.

ಜೆ. ಪಿ. ಗ್ರಾಂಟ್,
ಸೂ|| ಮೈಸೂರು ರೆವಿನ್ಯೂ ಸರ್ವೇ
ಮತ್ತು ಸೆಟಲ್ಮೆಂಟ್.

ಫಾರೆಸ್ಟ್ ಇಲಾಖೆ.

ಸ್ರ 1889ನೇ ಇಸವಿ ಏಪ್ರೆಲ್ ಮಾಹೆ ತಾರೀಖು 1.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮದರಾಸ್ ರೈಲ್ವೆ ಕಾಡುಗೋಡಿ ರೈಲ್ವೆಸ್ಟೇಷನಿಗೆ ಸಮೀಪದಲ್ಲಿ ಇರುವ ಕಾಡುಗೋಡಿ ಪ್ಲಾಂಟೇಷನಿನಲ್ಲಿ ಭೂಮಿಯಿಂದ ನಾಲ್ಕಡಿ ಯತ್ರದಲ್ಲಿ ಯರಡಡಿ ಮತ್ತು ಯರಡಡಿಗೆ ಮೇಲ್ಪಟ್ಟು ಸುತ್ತಳತೆಇರುವ ಸುಮಾರು (20000) ಕ್ಯಾಸರೀನಾ ಮರಗಳು ಬಿಕರಿ ಮಾಡಲ್ಪಡುವವು.

2. ಖರೀದಿಗೆ ತೆಗದುಕೊಳ್ಳಲು ಇಷ್ಟಪಡುವವರೆಲ್ಲರು ಸ್ರ 1889ನೇ ಇಸವಿ ಮೇ ತಾರೀಖು 10ರವಳಗಾಗಿ ಬೆಂಗಳೂರಲ್ಲಿ ಇರುವ ಪ್ಲಾಂಟೇರ್ಸ ಇನ್‌ಚಾರ್ಜ್ ಆಫೀಸರವರಿಗೆ ನಗದು ನೂರು ರೂಪಾಯಿ ಅಥವಾ ಕರ್ನಾಸು ನೋಟ್ ಮೂಲಕ ಡಿಪಾಜಿಟ್ ಸಮೇತ ಮೊಹರ್ ಮಾಡಲ್ಪಟ್ಟ ಲಕ್ಕೋಟೆಯಲ್ಲಿ ದರಖಾಸ್ತುಗಳನ್ನು ಕಳುಹಿಸಬಹುದು, ಸದರೀ 10ನೇ ತಾರೀಖಿನಲ್ಲಿ ಸಜ್ಜ ದರಖಾಸ್ತುಗಳನ್ನು ಆ ದಿವಸ ಹಾಜರಾಗುವ ದರಖಾಸ್ತುದಾರುಗಳ ಸಮಕ್ಷಮ ವಡದು ನೋಡಲ್ಪಡುವವು.

3. ದರಖಾಸ್ತುಗಳು "ಕಾಡುಗೋಡಿ ಪ್ಲಾಂಟೇಷನಿನಲ್ಲಿ ಬಿಕರಿಯಾಗುವ ಕ್ಯಾಸರೀನಾ ಮರಗಳ ದರಖಾಸ್ತೆಂದು" ಮೇಲ್ ವಿಳಾಸ ಬರಿಯಬೇಕು.

4. ಅಂಗೀಕರಿಸಲ್ಪಟ್ಟ ದರಖಾಸ್ತು ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ ಮಂಜೂರಾತಿಗೆ ಕಳಪಟ್ಟುಇರುತ್ತೆ.

5. ಪ್ಲಾಂಟೇರ್ಸ ಇನ್‌ಚಾರ್ಜ್ ಆಫೀಸರವರು ಯಾವ ದರಖಾಸ್ತನ್ನಾದರೂ ಕಾರಣವನ್ನು ನಮೂದಿಸದೇನೇ ತಿರಸ್ಕರಿಸಲೂ ಸ್ವತಂತ್ರರಾಗಿರುತ್ತಾರೆ.

6. ಮರಗಳು, ಪ್ಲಾಂಟೇರ್ಸ ಇಲಾಖೆಯವರಿಂದ ಕಡಿಯಲ್ಪಟ್ಟು 12 ಅಡಿಲಾಂಬಿಗೆ ಕಮ್ಮಿ ಇಲ್ಲದೆ ರಫ್ತಿಗೆ ಅನುಕೂಲವಾಗಿ ಇರುವಂತೆ ತುಂಡುಗಳು ಮಾಡಲ್ಪಜುತ್ತವೆ, ಅಥವಾ ದರಖಾಸ್ತುದಾರನು ತುಂಡುಗಳು ಮಾಡದೆ ಪೂರಾ ಮರಗಳನ್ನಾದರೂ ರಫ್ತು ಮಾಡಿಕೊಳ್ಳಬಹುದು. ದರಖಾಸ್ತುದಾರನಿಗೆ ರಫ್ತು ಮಾಡಿಕೊಳ್ಳುವ ಕೆಲಸ ಮಾಡ್ಕವಿರುವದ್ದರಿಂದ ಮರಗಳನ್ನ ಕತ್ತರಿಸುವ ಆಯುಧಗಳ್ಯಾವದನ್ನೂ ಅವನಾಗಲಿ ಅವನ ಕಡೆಯವರಾಗಲಿ ಪ್ಲಾಂಟೇಷನಿನ ವಳಕ್ಕೆ ತೆಗದುಕೊಂಡು ಹೋಗಕೂಡದು.

7. ಮರಗಳನ್ನು ಖರೀದಿಗೆ ತೆಗದುಕೊಳ್ಳುವಂಥಾವರು ದರ ಮರ 1ಕ್ಕೆ ಯಿಷ್ಟು ರೂಪಾಯಿ ಪ್ರಕಾರ ತೆಗದುಕೊಳ್ಳುತ್ತೇವೆಂದು ತಮಿಗೆ ಇಷ್ಟವಿರುವ ಮೊಬಲಗನ್ನ ದರಖಾಸ್ತಿನಲ್ಲಿ ನಮೂದಿಸಬೇಕು. ಮರಗಳ ರಂಬೆಗಳನ್ನೆಲ್ಲ ಫಾರೆಸ್ಟ್ ಇಲಾಖೆಯವರು ಮೊಳಕೆಯಿಕೊಳ್ಳುವದ್ದರಿಂದ ರಂಬೆಗಳು ರಹಿತವಾದ ಫಸ್ಟ್ ನಿಲುವು ಮರಗಳಿಗೆ ಮಾತ್ರ ದರಖಾಸ್ತುದಾರುಗಳ ಹಕ್ಕಾಗಿ ಇರುತ್ತೆ.

8. ಪ್ಲಾಂಟೇರ್ಸ ಆಫೀಸರವರಿಂದ ಕೊಡಲ್ಪಡುವ ಲೈಸೆನ್ಸಿನ ಆಧಾರದ ಮೇಲೆ ಆದರಲ್ಲಿ ಕಂಡ ವಾಯಿದೆ ವಳಗಾಗಿ ಮರಗಳನ್ನೆ ರಫ್ತು ಮಾಡಿಕೊಳ್ಳಲು ಎದ್ದರಾಗಿರಬೇಕು. ಮರಗಳ ಖರೀದಿ ಮೊಬಲಗು ಪೂರಾ ಪಾವತಿ ಮಾಡಿದ ಹೊರತು ಮರಗಳ ರಫ್ತಿಗೆ ಲೈಸೆನ್ಸು ಕೊಡಲ್ಪಡುವದಿಲ್ಲ.

9. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಅಂಗೀಕರಿಸಲ್ಪಟ್ಟಿತೆಂದು ತಿಳಿಸಲ್ಪಟ್ಟ ಲಾಗಾಯತು ಒಂದು ವಾರದ ವಳಗಾಗಿ ಬಿಕರಿ ಅಂದಾಜಿನ ಮೊಬಲಗು ಪೈಕಿ ಕೀಕಡಾ 25 ರೂಪಾಯಿಗಳಂತೆ ಆಗುವ ಮೊಬಲಗು ಡಿಪಾಜಿಟ್ ಹಾಜರ್ಮಾಡಲು ತಪ್ಪಿದಲ್ಲಿ ಅಥವಾ ಕ್ರಮಪ್ರಕಾರ ಛಾಪಾ ಕಾಗದದಲ್ಲಿ ದಸ್ತಾವೇಜು ಬರದುಕೊಡಲು ತಪ್ಪಿದಲ್ಲಿ ಯರಡನೇ ಕಲವಿನಲ್ಲಿ ನಮೂದಿಸಿರುವಂತೆ ಹಾಜರ್ಮಾಡಿದ ಠೇವಣಿ ಮೊಬಲಗು ದರಖಾಸ್ತುದಾರನಿಗೆ ವಾಪಸ್ ಕೊಡದೆ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ.

10. ಇನ್ನೂ ಈ ವಿಷಯದಲ್ಲಿ ತಿಳಿಯಲೇಕ್ಷೆಯುಳ್ಳ ತಪಶೀಲಗಳನ್ನು ಮತ್ತು ಕರಾರ್ ಪರತ್ತುಗಳನ್ನೂ ಬೆಂಗಳೂರು ದಿವಾನ ಕಚೇರಿಯಲ್ಲಿ ಇರುವ ಗವರ್ನಮೆಂಟ್ ಪ್ಲಾಂಟೇರ್ಸ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ಎಸ್. ಎ. ಬಾಪೂರಾವ್,
ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕಲೆಕ್ಟರ್.